## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 799 |
| ಮಾನ್ಯ ಸದಸ್ಯರ ಹೆಸರು | ಡಾ: ತೇಜಸ್ವಿನಿ ಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.12.2018 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಬಡ ಮಕ್ಕಳಿಗೆ ಸೂಕ್ತ ಶಿಕ್ಷಣ ಪಡೆಯಲು ಅವಶ್ಯಕತೆ ಇರುವಷ್ಟು ವಿದ್ಯಾರ್ಥಿ ನಿಲಯಗಳು ಲಭ್ಯವಿದೆಯೆ; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ರಾಜ್ಯದಲ್ಲಿ 1300 ಮೆಟ್ರಿಕ್-ಪೂರ್ವ (ಬಾಲಕ-1011, ಬಾಲಕಿ-289) ಮತ್ತು 1138 ಮೆಟ್ರಿಕ್-ನಂತರದ (ಬಾಲಕ- 507, ಬಾಲಕಿ- 631) ಹೀಗೆ ಒಟ್ಟು 2438 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ. |
| ಆ | ಗ್ರಾಮೀಣ ಭಾಗದಲ್ಲಿ ವಿಶೇಷವಾಗಿ ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ಸೌಲಭ್ಯವನ್ನು ಸಮರ್ಪಕವಾಗಿ ಒದಗಿಸಲಾಗಿದೆಯೇ; ಸುರಕ್ಷತೆ ಸೂಕ್ತವಾಗಿದೆಯೇ; | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಗ್ರಾಮೀಣ ಭಾಗದಲ್ಲಿ ಒಟ್ಟು 249 ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರವು ನಿಗಧಿಪಡಿಸಿರುವ ಸೌಲಭ್ಯಗಳನ್ನು ಸಮರ್ಪಕವಾಗಿ ನೀಡಲಾಗುತ್ತಿದೆ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಸಿ.ಸಿ. ಕ್ಯಾಮೆರಾವನ್ನು ಅಳವಡಿಸಿದ್ದು, ಸ್ವಂತ ಕಟ್ಟಡಗಳಲ್ಲಿ ಆವರಣ ಗೋಡೆ ನಿರ್ಮಿಸಲಾಗಿರುತ್ತದೆ. ರಾತ್ರಿ ಕಾವಲುಗಾರರನ್ನು ಸಹ ನೇಮಕ ಮಾಡಿ ವಿದ್ಯಾರ್ಥಿನಿಯರಿಗೆ ಸುರಕ್ಷತೆಯನ್ನು ನೀಡಲಾಗುತ್ತಿದೆ. |
| ಇ | ಕಳೆದ ಸರ್ಕಾರದ ಅವಧಿಯಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ನೀಡಬೇಕಿದ್ದ ಹಾಸಿಗೆ-ದಿಂಬು ಇತರೆ ಪರಿಕರ ಒದಗಿಸುವಲ್ಲಿ ಕೇಳಿ ಬಂದಿದ್ದ ಲೋಪ-ದೋಷಗಳ ಬಗ್ಗೆ ವಸ್ತುಸ್ಥಿತಿಯ ವರದಿ ನೀಡುವುದು | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿನ ವಿದ್ಯಾರ್ಥಿ ನಿಲಯದ ನಿಲಯಾರ್ಥಿಗಳಿಗೆ ಹಾಸಿಗೆ-ಹೊದಿಕೆ ನೀಡಲಾಗುತ್ತಿದ್ದು, ಹಿಂದಿನ ಅವಧಿಯಲ್ಲಿ ಯಾವುದೇ ಲೋಪ ದೋಷಗಳು ಕಂಡುಬಂದಿರುವುದಿಲ್ಲ. |
| ಈ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಬಂದಿರುವ ಕೇಂದ್ರದ/ರಾಜ್ಯದ ಅನುದಾನ ವೆಷ್ಟು; ಬಳಕೆಯಾಗಿರುವ ಉಳಿದಿರುವ ಮೊತ್ತವೆಷ್ಟು | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ 2017-18ನೇ ಸಾಲಿನಲ್ಲಿ ಕೇಂದ್ರ/ರಾಜ್ಯ ಸರ್ಕಾರದಿಂದ ನೀಡಲಾಗಿರುವ ಅನುದಾನ, ವೆಚ್ಚ ಮತ್ತು ಉಳಿಕೆಯಾಗಿರುವ ಮೊತ್ತದ ವಿವರಗಳು ಈ ಕೆಳಕಂಡಂತಿದೆ. *(ರೂ.ಲಕ್ಷಗಳಲ್ಲಿ)* |

| ವಿವರ | ಬಿಡುಗಡೆ | ಖರ್ಚು | ಉಳಿಕೆ |
|---|---|---|---|
| ಕೇಂದ್ರ ಸರ್ಕಾರ | 6426.32 | 6426.32 | 0.00 |
| ರಾಜ್ಯ ಸರ್ಕಾರ | 279151.80 | 270123.88 | 9027.92 |

ಸಂ: ಹಿಂವಕ 1262 ಬಿಎಂಎಸ್ 2018

(ಸಿ.ಪುಟ್ಟರಂಗಶೆಟ್ಟಿ)
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.